ಬಂದಿದ್ದಾರೆಯೆ? ಎಂದು ಕೇಳಿದಂತೆಯೂ ವಾಚ್‌ಮನ್ ಅವನನ್ನು ಕೇಳಿಕೊಳ್ಳುವ ಸಹನೆಯನ್ನೂ ತೋರಿಸದೇನೇ ಅಲ್ಲಿಂದ ಓಡಿಸಿದಂತೆಯೂ ಐದನೇ ಮಜಲೆಯ ಮೇಲಿಂದ ನೋಡುತ್ತಿದ್ದ ರಾವ್‌ಜೀಭಾಯಿಗೆ ಕಂಡಿತು. ಕಂಡಿದ್ದರ ಅರ್ಥ ತುಸು ತಡವಾಗಿಯೇ ಹೊಳೆಯಿತೆಂಬಂತೆ ವಾಮಕುಕ್ಷಿಯ ತಯಾರಿಯಲ್ಲಿದ್ದಂತಿದ್ದ ರಾವ್‌ಜೀಭಾಯಿ ತೊಟ್ಟುಕೊಂಡ ಬಿಳಿಯ ಪೈಜಾಮಾ, ಬನಿಯನ್ನಿನಂಥ ತೋಳುಗಳಿಲ್ಲದ ಗಿಡ್ಡ ಅಂಗಿಗಳಲ್ಲೇ ಹೆಂಡತಿಗಾಗಲೀ ಮನೆಯೊಳಗಿನ ಇತರರಿಗಾಗಲೀ ಹೇಳುವ ಪುರಸತ್ತೂ ಇಲ್ಲದವನ ಹಾಗೆ ಮನೆಯ ಕದ ತೆರೆದು ಹೊರಗೆ ಓಡಿಹೋಗಿ ತನ್ನ ಹಿಂದೆಯೆ ಸದ್ದಾಗದ ಹಾಗೆ ಕದವನ್ನು ಎಳೆದುಕೊಂಡ. ಲಿಫ್ಟಿಗಾಗಿ ಕಾದು ನಿಂತವನು. ಅದು ಕೂಡಲೇ ಬರುವ ಲಕ್ಷಣ ತೋರದೇ ಇದ್ದಾಗ ಬೆನ್ನೆಯಿಂದಲೇ ಇಳಿಯಲು ನಿರ್ಧರಿಸಿ ಕಾಲಲ್ಲಿ ಮೆಟ್ಟಿದ ಚಪ್ಪಲಿಗಳಿಂದ ಸದ್ದನ್ನೆಬ್ಬಿಸುತ್ತ ಐದೂ ಮಜಲುಗಳ ಮೆಟ್ಟಿಲುಗಳನ್ನಿಳಿದು ನೆಲ ಮುಟ್ಟಿದ. ಆ ಹೊತ್ತಿಗೆ ರಾವ್‌ಜೀಭಾಯಿಗೆ ಏದುಸಿರು ಹತ್ತಿ ಕಟ್ಟಕಡೆಯ ಮೆಟ್ಟಿಲ ಮೇಲೆ ಕೆಲ ಹೊತ್ತು ಹಾಗೇ ಕುಳಿತುಕೊಂಡ. ಆಮೇಲೆ ಏಗುತ್ತ ವಾಚ್‌ಮನ್ನನನ್ನು ಸಮೀಪಿಸಿ ಆಗ ಗೇಟಿನಲ್ಲಿ ಕಾಣಿಸಿಕೊಂಡ ಹುಡುಗನ ಬಗ್ಗೆ ವಿಚಾರಿಸಿದ. ಅವನು ಹುಡುಕುತ್ತಿದ್ದದ್ದು ತಮ್ಮ ಮನೆಯಾಗಿತ್ತೇ ಎಂದು ಕೇಳಿದವನು ಚೌಕಿದಾರನು ಉತ್ತರ ಕೊಡುವ ಮೊದಲೇ– “ನನ್ನ ಹೆಸರು ರಾವ್‌ಜೀಭಾಯಿ ದೇವಶೀ ಶಹ, ಎಂದು. ಐದನೇ ಮಜಲಿಯ 14ನೇ ನಂಬರು ಮನೆಗೆ ಹೊಸತಾಗಿ ಜನ ಬಂದಿಲ್ಲವೆ? ಅವರ ಪೈಕಿ” ಎಂದು ತನ್ನ ಪರಿಚಯ ಹೇಳಿದ. ಚೌಕಿದಾರನು ತಾನು ಇದೇ ಈಗ ತನ್ನ ಪಾಳಿಗೆ ಹಾಜರ್ ಆಗಿರುವನೆಂದೂ, ಬಹುಶಃ ಹುಡುಗ ಬಂದಾಗ ಡ್ಯೂಟಿಯ ಮೇಲೆ ಇದ್ದವನು ಈ ಮೊದಲಿನ ಪಾಳಿಯ ವಾಚ್‌ಮನ್ ಇರಬೇಕೆಂದೂ ತಿಳಿಸಿದಾಗ ರಾವ್‌ಜೀಭಾಯಿ ತಬ್ಬಿಬ್ಬಾದ. ಅಹುದಲ್ಲ! ಅನ್ನಿಸಿತು. ತಾನು ಕೆಳಗೆ ಬರುವಷ್ಟರಲ್ಲಿ ಹುಡುಗ ಹೊರಟುಹೋಗಿದ್ದನು ಮಾತ್ರವಲ್ಲ ವಾಚ್‌ಮನ್ನರು ಕೂಡ ಬದಲುಗೊಂಡಿದ್ದರು! ಹಾಗಾದರೆ ಮುಂಚಿನ ಪಾಳಿಯ ವಾಚ್‌ಮನ್ ತಿರುಗಿ ಬರುವುದು ನಾಳೆಗೇ ಏನೋ ಎಂದು ಪರಿಸ್ಥಿತಿಯನ್ನು ಒಪ್ಪಿಕೊಳ್ಳುವ ಧಾಟಿಯಲ್ಲಿ ಅನುಮಾನ ವ್ಯಕ್ತಪಡಿಸಿದ ರಾವ್‌ಜೀಭಾಯಿ. ಅವನು ನಾಳೆಯಿಂದಲೇ ಒಂದು ತಿಂಗಳ ರಜೆಯಮೇಲೆ ತನ್ನ ಊರಿಗೆ ಹೊರಟಿರುವನೆಂದು ತಿಳಿದಾಗ ತನ್ನ ಕಿವಿಗಳನ್ನು ನಂಬುವದು ಕಷ್ಟವಾಯಿತು. ನಂಬಲು ಕಷ್ಟವಾದಷ್ಟೂ ಆ ಹುಡುಗ ಕಾಣಲು ಬಂದದ್ದು ತನ್ನನ್ನೇ ಎಂಬುದರಲ್ಲಿ ಸಂಶಯವೇ ಇಲ್ಲವಾಯಿತು. ಅವನು ಚೌಕಿದಾರನಿಗೆ ಕೇಳಿದ ಪ್ರಶ್ನೆ ಕೂಡ ತನಗೆ, ಸ್ಪಷ್ಟವಾಗಿ ಕೇಳಿಸಿತ್ತು ಅದನ್ನು ಕೇಳಿಯೇ ತಾನು ಅಷ್ಟೊಂದು ತ್ವರೆಯಲ್ಲಿ ಓಡಿ ಬಂದದ್ದು ಎಂಬುದರ ಬಗೆಗೂ ಖಾತ್ರಿಯೆನ್ನಿಸಹತ್ತಿತು.

ರಾವ್‌ಜೀಭಾಯಿಗೆ ಇದೇನೂ ಹೊಸತಲ್ಲ. ಕಳೆದ 40 ವರ್ಷಗಳಲ್ಲಿ ಹೀಗೆ ತನಗೂ ತಾನು ಹುಡುಕುತ್ತಿದ್ದವನಿಗೂ ತಪ್ಪುಗಂಟಾದದ್ದು ಅದೆಷ್ಟು ಬಾರಿಯೋ! ರಾವ್‌ಜೀಭಾಯಿ ಲೆಕ್ಕ ಹಿಡಿಯಲಾರ. ರಾವ್‌ಜೀಭಾಯಿಗೆ ಈಗ 70 ವರ್ಷ ಪ್ರಾಯ. ಮದುವೆಯಾದ ಹೊಸದರಲ್ಲಿ ಹುಟ್ಟಿದ ಗಂಡುಮಗು ಮೂರು ವರ್ಷದ್ದಿದ್ದಾಗಲೇ ಕಳವಾಗಿ ಹೋದಾಗಿನಿಂದಲೂ ಕಾಣೆಯಾದ ಆ ಮಗುವನ್ನು ಹುಡುಕುತ್ತಲೇ ಇದ್ದಾನೆ, ರಾವ್‌ಜೀಭಾಯಿ. ಜನ ಮೊದಮೊದಲು ಸಹಾನುಭೂತಿ ತೋರಿದರು. ಚೊಚ್ಚಲು ಮಗುವನ್ನು ಕಳೆದುಕೊಂಡ ತರುಣ ಪ್ರಾಯದ ತಂದೆತಾಯಿಗಳ ದುಃಖ ನೋಡಿ ಮಮ್ಮಲ ಮರುಗಿದರು. ತಮ್ಮ ತಮ್ಮ ಮಕ್ಕಳ ಸುರಕ್ಷಿತತೆಯ ಬಗ್ಗೆ ದೇವರಲ್ಲಿ ಪ್ರಾರ್ಥಿಸುತ್ತ ಇಂಥ ದುರ್ಧರ ಪರಿಸ್ಥಿತಿ ಯಾರು ಯಾರಿಗೂ